International Journal of Kannada Research 2017; 3(1): 25-30




International Journal of Kannada Research
www.kannadajournal.com

**ISSN: 2454–5813**
IJSR 2017; 3(1): 25-30
© 2017 IJKS
www.kannadajournal.com
Received: 05-11-2016
Accepted: 08-12-2016

**ಸದಾಶಿವಯ್ಯ ಎಸ್. ಪಲ್ಲೇದ**
ಸ.ಪ.ಪೂ.ಕಾಲೇಜ, ಕುಶಾಲನಗರ,
ಸೋಮವಾರಪೇಟೆ, ಕೊಡಗು ಜಿಲ್ಲೆ

**ಸಂಶೋಧನಾ ವಿದ್ಯಾರ್ಥಿ**
ಜಾನಪದ ಹಾಗೂ ಬುಡಕಟ್ಟು ಅಧ್ಯಯನ ವಿಭಾಗ, ದ್ರಾವಿಡ ವಿಶ್ವವಿದ್ಯಾಲಯ, ಕುಪ್ಪಂ

**Correspondence**
**ಸದಾಶಿವಯ್ಯ ಎಸ್. ಪಲ್ಲೇದ**
ಸ.ಪ.ಪೂ.ಕಾಲೇಜ, ಕುಶಾಲನಗರ,
ಸೋಮವಾರಪೇಟೆ, ಕೊಡಗು ಜಿಲ್ಲೆ

# ಜನಪದ ಪ್ರಾಸ ಪದ್ಯದ ಆಟಗಳು

**ಸದಾಶಿವಯ್ಯ ಎಸ್. ಸಂಶೋಧನಾ ವಿದ್ಯಾರ್ಥಿ**

**ಸಾರಾಂಶ**
ಜನಪದ ಸಾಹಿತ್ಯವು ಮೌಖಿಕವಾಗಿದ್ದು, ಇದು ಬದುಕಿನ ಎಲ್ಲಾ ಕ್ರಿಯೆಗಳನ್ನು ಒಳಗೊಂಡಿದೆ. ಮಾನವನ ಬದುಕೇ ಒಂದರ್ಥದಲ್ಲಿ ಪ್ರಾಸ. ಮನುಷ್ಯನ ಪ್ರತಿಯೊಂದು ಕ್ರಿಯೆ ಉಸಿರಾಟ , ನಡಿಗೆ , ಆಂತರಿಕ ಕ್ರಿಯೆಗಳು, ಆಹಾರಸೇವನೆ, ನೀರು ಸೇವಿಸುವಿಕೆ, ಶಾರೀರಿಕ ಭಂಗಿಗಳು (ನಿಲ್ಲುವುದು, ಕೂರುವುದು ಮತ್ತು ಮಲಗುವುದು) ಹೀಗೆ ಎಲ್ಲವೂ ಪ್ರಾಸಬದ್ಧವಾಗಿ ನಡೆಯುತ್ತವೆ.ಹಾಗೇಯೇ ಜನಪದ ಆಟಗಳು ಜನಪದರ ಬದುಕಿನೊಂದಿಗೆ ಪ್ರಾಸ ಬದ್ದವಾಗಿ ಹೆಣೆದುಕೊಂಡಿವೆ. ಜನಪದರು ತಮ್ಮ ಜ್ಞಾನ ಭಂಡಾರವನ್ನು ರೂಢಿಸಿಕೊಂಡು, ಬೆಳೆಸಿಕೊಂಡು ಮುಂದಿನ ಜನಾಂಗಕ್ಕೆ ಅದನ್ನು ಸಾಗಿಸುವುದು ಈ ಪ್ರಾಸದ ಬಂಧದಿಂದಲೇ ಎನ್ನಬಹುದು.ಹೀಗೆ ಪ್ರಾಸಗಳು ಮತ್ತು ಆಟಗಳು ಜನಪದರ ಬದುಕಿನೊಂದಿಗೆ ಕ್ರಿಯಾಶೀಲವಾಗಿರುತ್ತವೆ.
ಜನಪದ ಆಟಗಳಿಗೆ ಚಾಲನೆಯನ್ನು ನೀಡುವುದಕ್ಕಾಗಿ ಆಟಗಳಲ್ಲಿ ಪ್ರಾಸ ಪದ್ಯಗಳು ಹುಟ್ಟಿಕೊಂಡವು. ಹೀಗಾಗಿ ಆಟಗಳಿಗೂ ಪ್ರಾಸಗಳಿಗೂ ಕ್ರಿಯಾಶೀಲತೆ ಪ್ರಾಪ್ತವಾಗುತ್ತದೆ. ಆಟಗಳನ್ನು ಅನ್ವಯಿಸಿಕೊಂಡು ಹುಟ್ಟಿದ ಆಟ ಪ್ರಾಸಗಳನ್ನು ಆಟದಿಂದ ಬಿಡಿಸಿ ತಬ್ಬಲಿಯನ್ನಾಗಿ ಮಾಡಲು ಸಾಧ್ಯವಿಲ್ಲ. ಅವು ಆಟದೊಂದಿಗೆ ಹೊಂದಿಕೊಂಡಿವೆ. ಆದ್ದರಿಂದ "ಕ್ರೀಡೆ" ಎನ್ನುವ ಶಬ್ದ ಇಲ್ಲಿ ಅತೀ ವಿಶಾಲ ವ್ಯಾಪ್ತಿ ಹೊಂದಿದೆ ಎಂದು ಹೇಳಬಹುದು. ಆಟಗಳಲ್ಲಿ ಬರುವ ಪದ್ಯದ ಆಟಗಳನ್ನು "ಆಟಪ್ರಾಸ" ಗಳೆಂದು ಕರೆಯಬಹುದು. ಉತ್ತರ ಕರ್ನಾಟಕ್ಕೆ ಸಂಬಂದಿಸಿದಂತೆ, "ಚುಕ್ಕೋಳ್ ಪದಗಳು" (ಡಾ. ಎಂ.ಎಸ್. ಲಠ್ಠೆ ವಿರಚಿತ ಕೃತಿ) ಆಟಪ್ರಾಸದ ಕೃತಿಯಾಗಿದೆ. ಒಂದು ಆಟದಲ್ಲಿ ಬರುವ ಪದ್ಯ ಪ್ರಾಸದ ಆಟ ಒಂದು ಸ್ಥಳದಲ್ಲಿದ್ದಂತೆ ಇನ್ನೊಂದು ಸ್ಥಳದಲ್ಲಿ ಯಥಾವತ್ತಾಗಿ ಸಿಗುವುದಿಲ್ಲ. ಆದರೆ ಅದೇ ಆಟದ ಪಠ್ಯವನ್ನು ಇನ್ನೊಂದು ಜಿಲ್ಲೆಗೆ ಹೋಲಿಸಿ ನೋಡಲಾಗಿ ಅಲ್ಲಿ ಭಾಷೆಯ ವ್ಯತ್ಯಾಸ ಕಂಡು ಬರುತ್ತದೆ.
ಹೀಗೆ ಜನಪದ ಆಟಗಳಲ್ಲಿ ಪ್ರಾಸ ಪದ್ಯದ ಆಟಗಳು ಪ್ರಮುಖವಾಗಿವೆ. ಕೆಲವು ಪ್ರಾಸ ಪದ್ಯ ಆಟಗಳನ್ನು ಕೆಳಗಿನಂತೆ ಊದಾಹರಿಸಬಹುದಾಗಿದೆ.

**ಹತ್ತಿ ಕಟಗಿ ಬತ್ತಿ ಕಟಗಿ**
ಇದು ಕೈಗಳನ್ನು ಉಪಯೋಗಿಸಿ ಆಡುವ ಗುಂಪು ಆಟವಾಗಿದೆ.ಈ ಆಟದಲ್ಲಿ ಭಾಗವಹಿಸುವ ಆಟಗಾರರು ತಮ್ಮ ಕೈಯನ್ನು ಅಂಗೈನೆಲಮುಖವಾಗಿ (ಬೋರಲಾಗಿ)ಇಟ್ಟು ವೃತ್ತಾಕಾರವಾಗಿ ಕುಳಿತುಕೊಳ್ಳುವರು. ಹಾಡು ಹೇಳುವ ಆಟಗಾರನು ತನ್ನ ಒಂದು ಕೈಯನ್ನು ಉಳಿದ ಆಟಗಾರರಂತೆ ಇಟ್ಟು, ಹಾಡು ಹೇಳುತ್ತಾ ಇನ್ನೊಂದು ಕೈ ಚಲನೆಯಿಂದ ಆಟವನ್ನು ಪ್ರಾರಂಭಿಸುವನು.

ಹತ್ತಿ ಕಟಗಿ ಬತ್ತಿ ಕಟಗಿ
ಬವನಾರ್ ಬಸನಾರ್
ಕೈಕೈ ದೂಳ್ ಕೈ
ಪಂಚಂ ಪಗಡಂ
ನೆಲಮೇಲೆ ಮಿಂಚಂ[1]

ಎಂದು ಹಾಡು ಹೇಳುತ್ತಾ ಒಂದೊಂದು ಪದಕ್ಕೆ ತನ್ನ ತೋರು ಬೆರಳಿನಿಂದ ಒಬ್ಬೊಬ್ಬರ ಕೈ ಮೇಲೆ ಬೆರಳಿಡುತ್ತಾ ಕೊನೆಯ ಪ್ರಾಸ ಪದ ಯಾರ ಕೈ ಮೇಲೆ ಬರುತ್ತದೊ ಅವರಿಗೆ ಗಿಂಟುತ್ತಾ ಶುಂಟಿ ಬೇಕಾ ? ಸಕ್ಕರೆ ಬೇಕಾ ? ಎಂದು ಕೇಳಿ ಅಂಗೈ ಮೇಲ್ಮುಖವಾಗಿ ಕೈಯನ್ನು ಇಡುತ್ತಾರೆ. ಹೀಗೆ ಆಟವು ಮುಂದುವರೆಯುತ್ತಾ ಹೋಗುವಾಗ ಕೊನೆಯ ಪ್ರಾಸ ಪದದ ಅಂಗೈ ಮೇಲ್ಮುಖವಾದ ಕೈಗೆ ಬಂದಾಗ ಆ ಅಂಗೈ ನಂತರ ಬೆನ್ನ ಹಿಂದೆ ಹೋಗುತ್ತದೆ. ಹೀಗೆ ಎಲ್ಲರ ಕೈ ಮೊದಲು ಅಂಗೈ ಮೇಲೆ ಆಗುವಂತೆ ಆಗಿ ನಂತರ ಎಲ್ಲರ ಕೈಗಳು ಬೆನ್ನ ಹಿಂದೆ ಹೋಗುತ್ತವೆ. (ಕೊನೆಗೆ ಒಂದೇ ಕೈ ಉಳಿದಾಗ ಪ್ರಾಸ ಹೇಳಿದಂತೆ ಅವನ ಹಣೆ ಮತ್ತು ಕೈಗೆ ಬೆರಳು

ಇಡುತ್ತಾ ಹೋಗಿ ಅಂಗೈ ಮೇಲ್ಮುಖವಾಗಿರುವಂತೆ ಮಾಡಲಾಗುತ್ತದೆ.) ಎಲ್ಲರ ಕೈಗಳು ಬೆನ್ನ ಹಿಂದೆ ಹೋದಾಗ ಆಟದ ಮೊದಲನೇ ಹಂತ ಮುಕ್ತಾಯವಾಗುತ್ತದೆ.

**ಎರಡನೆಯ ಹಂತ** ಪ್ರಶ್ನೋತ್ತರ ಮಾದರಿಯಲ್ಲಿ ನಡೆಯುತ್ತದೆ. ಪ್ರಶ್ನೆ ಕೇಳುವುದು ನಾಯಕಿ (ಪ್ರಾಸ ಹೇಳುವವಳು) ಉತ್ತರಿಸುವವರು ಉಳಿದ ಎಲ್ಲಾ ಆಟಗಾರರು.

ನಾಯಕಿ (ಪ್ರಾಸ ಹೇಳುವರೊಬ್ಬರು) : ಕೈ ಕೈ ಎಲ್ಲಿಟ್ಟೆ ? ಆಟಗಾರು: ಬಾಕಲ ಸಂದ್ಯಾಗಿಟ್ಯಾ
ನಾಯಕಿ : ಬಾಗಲೇನು ಕೊಟ್ತು? ಆಟಗಾರು: ಚಕ್ಕಿ ಕೊಟ್ತು
ನಾಯಕಿ : ಚಕ್ಕಿ ಏನು ಮಾಡದಿ? ಆಟಗಾರು: ಒಲ್ಯಾಗ ಹಾಕಿದೆ
ನಾಯಕಿ : ಒಲಿ ಏನು ಕೊಟ್ತು? ಆಟಗಾರು: ಬೂದಿ ಕೊಟ್ತು
ನಾಯಕಿ: ಬೂದಿ ಏನು ಮಾಡದಿ? ಆಟಗಾರು: ತಿಪ್ಪೆಗೆ ಹಾಕಿದ್ಯಾ
ನಾಯಕಿ : ತಿಪ್ಪಿ ಏನು ಕೊಟ್ತು? ಆಟಗಾರು: ಗೊಬ್ಬರ ಕೊಟ್ತು?
ನಾಯಕಿ : ಗೊಬ್ಬರ ಏನು ಮಾಡದಿ? ಆಟಗಾರು: ಹೊಲಕ್ಕೆ ಹಾಕಿದೆ
ನಾಯಕಿ : ಹೊಲ ಏನು ಕೊಟ್ತು? ಆಟಗಾರು: ಜೋಳ ಕೊಟ್ತು
ನಾಯಕಿ : ಜೋಳ ಏನು ಮಾಡದಿ? ಆಟಗಾರು: ಕುಂಬಾರಗೆ ಕೊಟ್ಟೆ
ನಾಯಕಿ : ಕುಂಬಾರ ಏನು ಕೊಟ್ಟಾ? ಆಟಗಾರು: ಕೊಡ ಕೊಟ್ಟ
ನಾಯಕಿ: ಕೊಡ ಎನ್ ಮಾಡಿದಿ?

ಹೀಗೆಯೇ ಪ್ರಶ್ನೋತ್ತರವು ಬಾವಿ, ನೀರು , ಹೂ, ದೇವರು , ಗಂಟೆ , ಆಕಳು , ಹಾಲು ಕೊನೆಗೆ ಅಜ್ಜನವರಿಗೆ ಬರುತ್ತದೆ
ನಾಯಕಿ : ಅಜ್ಜ ಎನು ಕೊಟ್ಟ? ಆಟಗಾರು: ಮೂರು ಗಜ್ಜ (ಏಟು) ಕೊಟ್ಟ[2]
ಎಂದು ಸಂಭಾಷಣೆ ಮುಗಿಯುತ್ತದೆ. ಗಜ್ಜ(ಪೆಟ್ಟು, ಏಟು. ಸಲಾಮ್) ಕೊಟ್ಟ ಎನ್ನುವ ಶಬ್ದ ಹೇಳಿದಾಗ ಎಲ್ಲರೂ ಜಾಗೃತರಾಗಿ ಓಡುತ್ತಾರೆ. ಆಗ ನಾಯಕಿ ಸಿಕ್ಕವರ ಕೆನ್ನೆಗೆ ಹೊಡೆಯಲು ಪ್ರಯತ್ನಿಸುವಳು. ಆಟಗಾರರು ಅದರಿಂದ ತಪ್ಪಿಸಿಕೊಳ್ಳುವರು. ಒಂದುವೇಳೆ ನಾಯಕಿ ಕೈಗೆ ಸಿಕ್ಕವರು ಔಟ್ ಆದ ಹಾಗೆ (ಕೆಲವು ಕಡೆ ಒಂದೇ ಹಂತದಲ್ಲಿ ಮುಗಿಸಿದರೆ ಇನ್ನು ಕೆಲವು ಕಡೆ ಎರಡನೇ ಹಂತದ ಆಟವನ್ನು ಆಡುವರು). ಈ ಆಟಕ್ಕೆ ಕೈ ಕೈ ಎಲ್ಲಿಟ್ಟೆ ? ಚಕ್ಲಿಮಕ್ಲಿ, ಊಪಾರಂಗಿ ಉಪಾರಂಗಿ, ಅವಲಕ್ಕಿ ಪವಲಕ್ಕಿ, ಅಪ್ಪಪ್ಪಡಿ ಮುಂತಾದ ಸೇರುಗಳಿಂದ (ಆಟದಲ್ಲಿನ ಪ್ರಾಸಕ್ಕನುಗುಣವಾಗಿ) ಕರೆಯುತ್ತಾರೆ.

**ಅತ್ತಿ ಅತ್ತಿ ಬಿದ್ದೆ**

ಇದು ನಾಟಕೀಯ ಆಟವಾಗಿದೆ. ಇದು ಹೆಣ್ಣು ಮಕ್ಕಳ ಆಟವಾಗಿದೆ. ಮೂವರು ಅಥವಾ ಅದಕ್ಕಿಂತ ಹೆಚ್ಚು ಹುಡುಗಿಯರು ಕೈ ಕೈ ಕೂಡಿಸಿ ವೃತ್ತಾಕಾರದಲ್ಲಿ (ಕೋಟೆ ಕಟ್ಟಿದಂತೆ ) ನಿಲ್ಲುತ್ತಾರೆ .ಅವರ ಮಧ್ಯದಲ್ಲಿ ಕಳ್ಳಿಯಾದವಳು ಎರಡು ಕೈ ನೆಲಕ್ಕೂರಿ ಬಿದ್ದಂತೆ ನಟಿಸುತ್ತಾಳೆ. ಆಗ ಸಂಭಾಷಣೆ ನಡೆಯುತ್ತದೆ.

ಕಳ್ಳಿ (ಬಿದ್ದವಳು / ಸೊಸೆ): ಅತ್ತಿ ಅತ್ತಿ ಬಿದ್ದೆ ಉಳಿದ ಆಟಗಾರರು: ಹ್ಯಾಂಗ ಬಿದ್ದಿ
ಕಳ್ಳಿ (ಬಿದ್ದವಳು): ಕಾಲ ಜಾರಿ ಬಿದ್ದೆ ಉಳಿದ ಆಟಗಾರರು: ಏನೇನು ಕಳದವು?
ಕಳ್ಳಿ (ಬಿದ್ದವಳು): ಹವಳ ಮುತ್ತು ಕಳದವು ಊಳಿದ ಆಟಗಾರರು: ಸಿಕ್ಕೈತ್ತಿಲ್ಲ?
ಕಳ್ಳಿ (ಬಿದ್ದವಳು): ಇಲ್ಲಾ ಉಳಿದ ಆಟಗಾರರು: ಇನ್ನೊಮ್ಮೆ ಹುಡುಕು
ಕಳ್ಳಿ (ಬಿದ್ದವಳು): ಹುಡುಕಿದೆ ಉಳಿದ ಆಟಗಾರರು: ಮಾವಗ ಕರಿಲ್ಲೋ ನಾನ ಬರಲ್ಲೋ?
ಕಳ್ಳಿ (ಬಿದ್ದವಳು): ಸಿಕ್ಕಿತ್ತು, ಸಿಕ್ಕೀತು[3]

"ಎಲ್ಲಿ "ಎಂದು ಕೇಳಿ ಕಾಣದೆ ಹೋದಾಗ ಆಟಗಾರರೆಲ್ಲಾ ಹೊಡೆಯುತ್ತಾರೆ . ಆಗ ಬಿದ್ದವಳು(ಸೊಸೆ) ಮರಳಿ ಹೊಡೆಯಲು ಬೆನ್ನಟ್ಟಿದಾಗ ಅತ್ತೆಯಾದವರೆಲ್ಲ ಓಡಿ ಹೋಗುವುದುಂಟು , ಓಡುವಾಗ ಮೊದಲು ಯಾರು ಹೊಡೆಸಿಕೊಳ್ಳುತ್ತಾರೊ ಅವರು ಮುಂದಿನ ಆಟಕ್ಕೆ ಕಳ್ಳಿ ( ಸೊಸೆ / ಬಿದ್ದವಳು) ಆಗುತ್ತಾಳೆ. ಹೀಗೆ ಆಟ ಮುಂದುವರೆಯುತ್ತದೆ.

**ಮುದುಕಿ ಆಟ**

ಇದೊಂದು ನಾಟಕೀಯ ಆಟವಾಗಿದ್ದು, ಈ ಆಟಕ್ಕೆ ಮುಟ್ಟಾಟ, ಮುದುಕಿ ಮುದುಕಿ ಎಲ್ಲಿಗೆ ಹೊಂಟಿ ? ದೋಸೆ ಅಜ್ಜಿ ಆಟ , ಅಜ್ಜಿಯ ಸೂಟಿ ಆಟ , ಕೋಲಜ್ಜಿ ಆಟ ಎಂದು ಕರೆಯುವುದುಂಟು. ಇಲ್ಲಿ ಒಬ್ಬಳನ್ನು ಕಳ್ಳಿ ಅಥವಾ ಮುದುಕಿಯನ್ನು ಆರಿಸುತ್ತಾರೆ. ಆ ಮುದುಕಿ ಕೈಯಲ್ಲೊಂದು ಕೋಲು ಹಿಡಿದು ಮುದುಕಿಯಂತೆ ನಟನೆ ಮಾಡುತ್ತಾ ನಡೆಯುತ್ತಾಳೆ . ಇನ್ನುಳಿದ ಆಟಗಾರರು ಮುದುಕಿಯನ್ನು ಪ್ರಶ್ನೆ ಕೇಳುತ್ತಾ ಬೆನ್ನು ಹತ್ತುತ್ತಾರೆ. ಮುದುಕಿ ಉತ್ತರ ಕೊಡುತ್ತಾ ಹೋಗುತ್ತಾಳೆ.

ಆಟಗಾರರು: ಮುದುಕಿ ಮುದುಕಿ ಎಲ್ಲಿ ಹೊಂಟಿ? ಮುದುಕಿ: ಹೊಲಕ್ಕ ಹೊಂಟಿನಿ
ಆಟಗಾರರು: ನಾವು ಬರುತ್ತೇವು ಮುದುಕಿ: ನಿಮ್ಮಪ್ಪ, ನಿಮ್ಮವ್ವಗೆ ಕೇಳಿ ಬಾ
ಆಟಗಾರರು: ಕೇಳಿ ಬಂದ್ಯಾ ಮುದುಕಿ: ಏನಂದ್ರು
ಆಟಗಾರರು: ಹೋಗಂದ್ರು ಮುದುಕಿ: ಹಂಗಾರ ಬುತ್ತಿ ಕಟಗೊಂಡ ಬಾ
ಆಟಗಾರರು: ಕಟಿಗೊಂಡ ಬಂದ್ಯಾ ಮುದುಕಿ: ಹೊತಕೊಂಡ ನಡಿ
ಆಟಗಾರರು: ನನ್ನ ಕೈಸೋತಾದ ನೀನೂ ಹಿಡಿಕೊ ಮುದುಕಿ: ನನ್ನ ಬುತ್ತಿ ಏನ್ ಮಾಡ್ಲಿ?
ಆಟಗಾರು: ನಾಯಿ ಕೊಳ್ಳಾಗ ಕಟ್ಟು ಮುದುಕಿ: ನಾಯಿ ತಿಂದ್ರ ನಾನೇನು ಮಾಡ್ಲಿ
ಆಟಗಾರು: ನೀ ಅದರ ಹೇಲು ತಿನ್ನು[4]

ಎಂದು ಹೇಳಿ ಆಟಗಾರರು ಓಡಿಹೊಗುತ್ತಾರೆ. ಮದುಕಿ ಅವರನ್ನು ಬೆನ್ನು ಹತ್ತಿ ಬಡಿಗೆ(ಕೋಲು) ತೆಗುದುಕೊಂಡು ಹೊಡೆಯುತ್ತಾಳೆ. ಅದು ಯಾರಿಗೆ ಮೊದಲು ಕೋಲಿನಿಂದ ಹೊಡೆಯುತ್ತಾಳೆಯೋ ಅವರು ಮುಂದಿನ ಆಟಕ್ಕೆ ಮುದುಕಿ ಆಗಬೇಕು. ಹಾಗೇ ಆಟ ಮುಂದುವರೆಯುತ್ತದೆ. ಅವರು ಬೇಕಾಗಷ್ಟು ಸಮಯ ಆಡಿ ಆಟ ನಿಲ್ಲಿಸಬಹುದು. ಕೆಲವು ಜಿಲ್ಲೆಗಳಲ್ಲಿ ಈ ಆಟದ ಸಂಭಾಷಣೆ ಬೇರೆ ಬೇರೆ ಆಗಿರುತ್ತೆ. ಊರಿಗೆ ಹೋಗುವಾಗ ಕಾಲು ಸೋತಿವೆ ಎತ್ತಕೊ ಎನ್ನುವುದು, ಹೊಟ್ಟೆ ಹಸಿದಿದೆ ತಿನ್ನುವೆ ಮುಂತಾದ ಹೇಳಿಕೆಗಳು ಕೆಂಡುಬಂದರೂ ಮೂಲ ಆಶಯದಲ್ಲಿ ಮಾತ್ರ ಬದಲಾವಣೆ ಆಗುವುದುವುದಿಲ್ಲ.

**ಸಕ್ಕಾ ಸರಗಿ:**

ಈ ಆಟವನ್ನು ಸಾಮಾನ್ಯವಾಗಿ ಹೆಣ್ಣು ಮಕ್ಕಳು ಆಡುತ್ತಾರೆ. ಇಬ್ಬರು ಮುಖಾಮುಖಿಯಾಗಿ ನಿಂತು ಕೈಗಳನ್ನು ಪರಸ್ಪರವಾಗಿ ಕತ್ತರಿ ಹಾಕಿ ಹಿಡಿದುಕಂಡು ಜೋಡಿ ಜೋಡಿಯಾಗಿ ಆಡುವ ಆಟವಾಗಿದೆ. ನಂತರ ಹಿಂದಕ್ಕೆ ಭಾರ ಹಾಕಿ ಸೆಟೆದು ನಿಂತು ಪಾದಗಳಿಗೆ ಚಾಲನೆ ನೀಡದೆ ನಿಂತಲ್ಲಿಯೇ ಗಿರಗಿರನೆ ಸುತ್ತಲು ತಿರುಗುವರು (ಚಕ್ರದಂತೆ) . ತಿರುಗುವಾಗ ಪ್ರಾಸವನ್ನು ಒಬ್ಬರಿಗೆ ಒಬ್ಬರು ಹೇಳುತ್ತಾರೆ. ಯಾರು ಪ್ರಾಸವನ್ನು ಹೇಳುವುದು ತಪ್ಪುತ್ತಾರೊ ಅಥವಾ ತಿರುಗುವುದರಲ್ಲಿ ವಿಫಲವಾಗುತ್ತಾರೊ ಅಥವಾ ಸಾಕೆಂದು ಕೇಳಿಕೊಂಡರೆ ಅವರು ಸೋತಂತೆ.

| | |
|---|---|
| ಒಬ್ಬಳು: ಸಕ್ಕಾಸರಗಿ | ಇನ್ನೊಬ್ಬಳು: ಗೋಧಿ ಮುರಗಿ |
| ಒಬ್ಬಳು: ಬಗಾಟ ಬಗರಿ ಬಾಸಿಂಗ್ | ಇನ್ನೊಬ್ಬಳು: ಚಂಡಾಳಗೊಂಬೆ ಲಾಲಿಂಗ್ |
| ಒಬ್ಬಳು: ಜೋಳಕಟ್ಟಿ ಚನ್ನವ್ವಾ | ಇನ್ನೊಬ್ಬಳು: ದೀಪಾ ಹಚ್ಚ ಮಲ್ಲವ್ವಾ |
| ಒಬ್ಬಳು: ಗಿರಿ ಗಿರಿ ಗಿಂಡಿ | ಇನ್ನೊಬ್ಬಳು: ಇಬತ್ತಿ ಉಂಡಿ[5] |

ಇದೇ ರೀತಿಯಾಗಿ ನಾಲ್ಕು ಜನರು ಕೂಡ ಕತ್ತರಿಯಾಗಿ ಕೈ ಹಿಡಿದು ತಿರುಗುತ್ತಲೂ ಆಡುವುದುಂಟು.ವಿವಿಧ ಕಡೆಗಳಲ್ಲಿ ಈ ಆಟವನ್ನು ಅಪ್ಪಾಳೆ ತಿಪ್ಪಾಳೆ, ಬಗಾಟ ಬುಗುರಿ, ಪುಗಡಿ ಆಟ ಎಂದು ಕರೆಯುತ್ತಾರೆ. ಈ ಆಟದಿಂದಿ ಕೈ ಮತ್ತು ಕಾಲಿನ ಸ್ನಾಯುಗಳು ಬಲಗೊಳ್ಳುತ್ತವೆ, ಧೈರ್ಯ ಒಡ ಮೂಡುತ್ತದೆ, ಸಹಕಾರ ಭಾವ ಬೆಳೆಯುತ್ತದೆ.

**ಕುಕ್ಕರ ಬಸವಿ;**

ಈ ಆಟಕ್ಕೆ ಹತ್ತೊಂಬಾಳ ಹಲಗಿ ಬಡ್ಡಿ ( ಹಲಗಿ ಬಾಳು), ದೋಸೆ ಹೂಯ್ಯು, ಅಟ್ಟಾಮುಟ್ಟಾ , ಅಂಬಲ ಗಡಿಗ್ಯಾಗ , ಹೀಗೆ ಹಾಡಿನ ಪ್ರಾಸದ ಅಧಾರದ ಮೇಲೆ ಅನೇಕ ಹೆಸರುಗಳಿಂದ ಕರೆಯುತ್ತಾರೆ.

ಈ ಆಟದಲ್ಲಿ ಅನುಭವಿ ಇಬ್ಬರು ಆಟಗಾರರನ್ನು ಬಿಟ್ಟು ಉಳಿದ ಆಟಗಾರರು ಕೈಕೈ ಜೋಡಿಸಿ ವೃತ್ತಾಕಾರವಾಗಿ ನಿಲ್ಲುತ್ತಾರೆ. ಅನುಭವಿ ಇಬ್ಬರು ಆಟಗಾರರನ್ನು ಹಿರಿಗಡತಿಗಳು ಅಥವಾ ನಾಯಕಿಯರು ಎನ್ನೂತ್ತಾರೆ. ಈ ಹಿರಿಗಡತಿಗಳು ವೃತ್ತದ ಒಳಗೆ ಒಬ್ಬಳು ಮತ್ತು ಇನ್ನೊಬ್ಬಳು ವೃತ್ತದ ಹೊರಗೆ ನಿಂತು ಪರಸ್ಪರ ಕೈಯನ್ನು ತತ್ತು ಹಾಕಿದ ರೀತಿಯಲ್ಲಿ ನಿಂತು ವೃತ್ತದಲ್ಲಿನ ಒಬ್ಬಳ ಭುಜದ ಮೇಲೆ ಚಪ್ಪರಿಸುತ್ತಾ ಈ ರೀತಿ ಹಾಡನ್ನು ಹೇಳುತ್ತಾರೆ.

ಹತ್ತೊಂಭಾಳಾ ಹಲಗಿ ಬಡ್ಡಿ
ನಾಯಿಗೆ ನುಚ್ಚು ಹಾಕುವರಿಲ್ಲ
ಬೆಕ್ಕಿಗೆ ಹಾಲ ಕುಡಿಸವರಿಲ್ಲ
ಕೊಪ್ಪರಗಿ ಹಾಲ ಕಾಸವರಿಲ್ಲ
ಕಿಟ್ಟದ ಕುಳ್ಳು ಬಡಿಯವರಿಲ್ಲ
ಜೀಯ್ ಜಿಟಿಕ್, ಸೂಯ್ ಸೂಟಕ್[6]

ಎಂದು ಪ್ರಾಸ ಪದ್ಯ ಹೇಳಿದ ನಂತರ ಸಂಬಾಷಣೆ ನಡೆಸುತ್ತಾರೆ. ಚಪ್ಪರಿಸಿದ ಆಟಗಾರಳಿಗೆ ಈ ರೀತಿ ಯಾಗಿ ಹಿರಿಗಡತಿಗಳು ಹೇಳುವರು

ಹೀಗೆ ಒಂದೊಂದಾಗಿ ಹೇಳಿದರು, ಅವಳು ಕುಳಿತುಕೊಳ್ಳುವುದಿಲ್ಲ. ಕೊನೆಗೆ ಮುತ್ತಿನಂಥ ಗಂಡನ್ನ ಕೊಡ್ತಿನಿ.ಕುಂದ್ರು. ಎಂದಾಗ ಕುಳಿತುಕೊಳ್ಳುವರು. ಹೀಗೆ ಭುಜಕ್ಕೆ ಚಪ್ಪರಿಸುತ್ತಾ , ಪ್ರಾಸ ಹೇಳುತ್ತಾ ಎಲ್ಲಾ ಆಟಗಾರರನ್ನು ಕೂರಿಸುತ್ತಾರೆ. ನಂತರ ಆಟದ ಎರಡನ್ನೇ ಹಂತದ ಸಾಲುಗಳು ಪದ್ದತಿ ಪ್ರಾರಂಭವಾಗುತ್ತದೆ.

**ಎರಡನೇ ಹಂತದಲ್ಲಿ** ಎಲ್ಲಾ ಆಟಗಾರರು ಕೈಕೈ ಹಿಡಿದು ಕೋಟೆ ಕಟ್ಟಿದ ಹಾಗೆ ವೃತ್ತಾಕಾರದಲ್ಲಿ ಕುಳಿತುಕೊಳ್ಳುತ್ತಾರೆ. ಅದನ್ನು ಆಟದ ನಾಯಕರು ಅವರ ಕಾಲಿನಿಂದ ಕೈ ಬಿಡಿಸುತ್ತಾರೆ.

**ಮೂರನೇ ಹಂತದಲ್ಲಿ:** ನಾಯಕಿಯಾದವಳು ಉಳಿದ ಆಟಗಾರರನ್ನು ನಗಿಸಲು ಕೆಲವು ಪ್ರಾಸಗಳನ್ನು ಹೇಳುತ್ತಾರೆ. ನಾಯಕಿ ನಗುವವರನ್ನು ತಿರುಗಿಸುತ್ತಾರೆ. ಪ್ರಾಸಪದ : ನಿನ್ನ ಗಂಡ ಒಳ್ಳಾಗ ಕುಳಿತು ಚಾ ಕುಡಿತಾನ, (ನಿನ್ನ ಹೆಂಡ್ತಿ ಹಂಡೆ ತುಂಬಾ ಚಾ ಕುಡಿತಾಳ,) ಇತ್ಯಾದಿ

**ನಾಲ್ಕನೇ ಹಂತದಲ್ಲಿ**: ಪ್ರತಿ ಆಟಗಾರರು ತಮ್ಮತಮ್ಮ ಕಾಲಿನ ಹೆಬ್ಬೆರಳು ಹಿಡಿದುಕೊಂಡು ಆಟಗಾರರನ್ನು ಕುಟ್ಟುವುದು ಅಥವಾ ಬೀಸುವುದು ನಡೆಯುತ್ತದೆ. ಬೀಸುವುದು ಎಂದರೆ ನಾಯಕಿಯರು ಅವರ ಬಗಲಲ್ಲಿ ಕೈ ಹಾಕಿ ಮೇಲಕ್ಕೆ ಎತ್ತಿ ಬೀಸುವ ಕಲ್ಲಿನಹಾಗೇ ತಿರುಗಿಸುತ್ತಾರೆ . ಹಾಗೆಯೇ ಕುಟ್ಟುವುದು ಎಂದರೆ ಶೌಶೌ ಎಂದು ನೆಲಕ್ಕೆ ಮೇಲಿಂದ ಕೆಳಗೆ ಒನಕೆ ಹಾಗೆ ಕುಟ್ಟುವ ಕ್ರಿಯೆಯಾಗಿದೆ. ಸಾಲಾಗಿ ಒಬ್ಬನ ನಂತರ ಒಬ್ಬರಿಗೆ ಕೇಳುತ್ತಾ ಆಟ ಮುಂದುವರೆಯುವುದು.

**ಐದನೇಹಂತ:** ಈ ಹಂತದಲ್ಲಿ ಆಟಗಾರರು ತಮ್ಮ ಕೈಗಳನ್ನು ಒಲೆ ಆಕಾರದಲ್ಲಿ ಹಿಡಿಯುವವರು. ನಾಯಕಿಯರು ಅಲ್ಲಿ ಅಡುಗೆ ಮಾಡುವ ಕ್ರಿಯೆ ನಡೆಯುತ್ತದೆ.

**ಆರನೇ ಹಂತ:** ನಾಯಕಿಯರು ಆಟಗಾರರ ಬೆನ್ನ ಮೇಲೆ ಕುಳಿತು ಅಯ್ಯೋ ಅಡುಗೆ ಸಿಹಿ, ಅಯ್ಯೋ ಅಡುಗೆ ಕಹಿ ಎಂದು ಹೇಳುತ್ತಾ ಆಟಗಾರರಿಗೆ ಕೊಡದೇ ರೀತಿಯಲ್ಲಿ ತಾವೇ ಊಟಮಾಡುವ ಕ್ರಿಯೆ ನಡೆಯುತ್ತದೆ.

**ಏಳನೇ ಹಂತ:** ರಾತ್ರಿಯಾಗಿದೆ ಎಂದು ಮಲಗುವುದುಂಟು. ಇಲ್ಲಿ ಆಟಗಾರರು ಸಾಲಾಗಿ ಮಂಚದ ಆಕಾರದಲ್ಲಿ ಮಲಗುವರು. ನಾಯಕಿಯರು ಅವರ ಮೇಲೆ ( ಮಂಚದ ಮೇಲೆ) ಮಲಗುವರು . ಆಟಗಾರರು ನಾಯಕಿಯನ್ನು ಚಿವುಟುವುದು ಮಾಡುತ್ತಾರೆ. ಆಗ ನಾಯಕಿಯರು ಅಯ್ಯೋ ತಿಗಣೆ ಎಲ್ಲಿಂದ ಬಂತಾ ? ಎಂದು ದೀಪ ಹಚ್ಚುವ ಕ್ರಿಯೆ ನಡೆಯುತ್ತದೆ. ಆಟಗಾರರು ಚಿವುಟುವುದು

ಮಾಡುವಾಗ ನಾಯಕರು ಅಯ್ಯೋ ಎಲ್ಲಿದ್ಯಾ ತಿಗಣಿ ಎಂದು ಕೈಗೆ ಹೊಡೆಯುವರು.

**ಎಂಟನೆಯ ಹಂತ:** ಈ ಹಂತದಲ್ಲಿ ಬೆಳಗಾಗುತ್ತೆ, ಬಟ್ಟೆ ತೊಳೆಯುವುದಕ್ಕೆ ಹಿರಿಗಡತಿಗಳು ಕೆರೆಗೆ ಹೊರಡುವಾಗ ಅರ್ಧ ದಾರಿಯಲ್ಲಿ ತಿರುಗಿ ನೋಡಿದಾಗ ಆಟಗಾರರು ಎದ್ದು ಮೂತ್ರ ವಿಸರ್ಜನೆಗೆ ಹೋಗುವಂತೆ ನಟಿಸುತ್ತಾರೆ. ಆಗ ನಾಯಕಿಯರು (ಹಿರಿಗಡತಿಗಳು) "ಅಯ್ಯೋ ನಿನ್ನ ಬಾಯಾಗ ಮಣ್ಣು, ತೊಗರ್ಯಾಗ ಉಚ್ಚಿ ಹೊಯಿತಾವೆ"ಎಂದು ಹೊಡೆಯಲು ಬೆನ್ನು ಹತ್ತುತ್ತಾರೆ. ಮೊದಲಿಗೆ ಯಾರು ಹೊಡೆಸಿಕೊಳ್ಳುತ್ತಾರೋ ಅವರು ನಾಯಕಿಯನ್ನು ಹೊತ್ತುಕೊಂಡು ಮೊದಲಿದ್ದ ಸ್ಥಳಕ್ಕೆ ಬರಬೇಕು. ಪುನಃ ಆಟ ಮೊದಲಿನಂತೆ ಮುಂದುವರೆಯುವುದು.

**ಗುಳ್ಳವ್ವನಾಟ**

ಗುಳ್ಳವ್ವನಾಟ ಜಾನಪದದ ಒಂದು ಆಚರಣೆ. ಈ ಆಟವನ್ನು ಹಳ್ಳಿಗಾಡಿನ ಹೆಣ್ಣು ಮಕ್ಕಳು ಶ್ರಾವಣ ಮಾಸಕ್ಕಿಂತ ಮೊದಲು ಬರುವ ಆಷಾಡ ಮಾಸದಲ್ಲಿ ಬರುವ ಮಂಗಳವಾರಗಳಂದು ಆಚರಿಸುವರು. ಈ ಅವಧಿಯಲ್ಲಿ ನಾಲ್ಕು ಇಲ್ಲವೆ ಐದು ಮಂಗಳವಾರ ಬರುವುದುಂಟು. ಸಾಯಂಕಾಲ ಸಮಯದಲ್ಲಿ ಬಯಲು, ಹೊಲ , ಕೆರೆ , ಬಾವಿ, ಹೊಳೆ, ನೀರು ಇದ್ದ ಕಡೆಗೆ ಮಣೆ, ಹಲಿಗೆ, ಚುರುಮುರು, ಶೇಂಗಾ ಪುಟಾಣಿ ತೆಗೆದುಕೊಂಡು ಹೆಣ್ಣು ಮಕ್ಕಳು ಗುಂಪು ಗುಂಪಾಗಿ " ಓಹೋ ಗುಳ್ಳವ್ವ ನಾಡೋಣ ಬಾ, ಕೆರಿ ದಂಡಿ ಮಣ್ಣ ತರೋಣ ಬಾ " ಎಂದು ಹಾಡುವುದುಂಟು , ಹಾಡತ್ತಾ ನಲಿಯುತ್ತಾ ಬಂದು ಬಾಲೆಯರೆಲ್ಲಾ ಒಂದು ಕಡೆಗೆ ಸೇರುತ್ತಾರೆ. ಆಮೇಲೆ ಅಲ್ಲಿಂದ ಕೆಸರನ್ನು ತೆಗೆದುಕೊಂಡು ಮಿದ್ದಿ ಮಿದ್ದಿ ಗೋಲಾಕಾರವಾಗಿ ಮಾಡತ್ತಾರೆ. ನಂತರ ಅದನ್ನು ತಂದು ಚೌಕಿ ಮಣಿಯ ಹಲಿಗೆ ಮೇಲಿಟ್ಟು ಅದಕ್ಕೆ ಕುಂಕುಮ, ಅರಿಶಿಣ ಹಚ್ಚುತ್ತಾರೆ. ಹೂವನ್ನು ಏರಿಸಿ ಪೂಜೆಯನ್ನು ಮಾಡುತ್ತಾರೆ. ನಂತರ ತಾವು ತಂದಿರುವ ತಿನ್ನುವ ಪದಾರ್ಥವನ್ನು ನೈವೇದ್ಯವಾಗಿ ಹಿಡಿಯುತ್ತಾರೆ.

ನಂತರ ಎಲ್ಲರೂ ಸೇರಿ ಆ ಪದಾರ್ಥಗಳನ್ನು ತಿಂದು ಗುಳ್ಳವ್ವನನ್ನು ತಲೆಯ ಮೇಲೆ ಹೊತ್ತುಕೊಂಡು ಮನೆಗೆ ಬರುತ್ತಾರೆ. ಆಮೇಲೆ ಗುಳ್ಳವ್ವನ ಮಣ್ಣನ್ನು ಮತ್ತೆ ತಿದ್ದುತ್ತಾರೆ. ಹೀಗೆ ತಿದ್ದಿದ ಮಣ್ಣಿನ ಮುದ್ದೆಯನ್ನು ಆಡುವ ಪ್ರತಿ ವಾರವೂ ಒಂದೊಂದು ಆಕಾರದ ಗುಳ್ಳವ್ವನನ್ನು ಮಾಡುವರು . ಮೊದಲನೆಯ ವಾರ ಲಿಂಗದ ಆಕಾರವನ್ನು ,ಎರಡನೆಯ ವಾರ ಗುಡಿಯಾಕಾರವನ್ನು , ಮೂರನೇವಾರ ಕಟ್ಟೆಯಾಕಾರವನ್ನು , ನಾಲ್ಕನೇಯ ವಾರ ನವಿಲಾಕಾರದ ಗುಳ್ಳವ್ವನ ಮಾಡಿ ಆಡುತ್ತಾರೆ. ಕೆಲವೊಂದು ಸಲ ಐದು ಮಂಗಳವಾರ ಬಂದಾಗ ಐದನೆಯ ವಾರದಂದು ಕುಂಬಾರರು ಮಾಡಿದ ಗುಳ್ಳವ್ವನನ್ನು ತರುತ್ತಾರೆ. ಇಲ್ಲಿ ಪ್ರತಿ ಮಂಗಳವಾರದಂದು ಗುಳ್ಳವ್ವಗಳಲ್ಲಿ ವೈವಿದ್ಯತೆ ಉಂಟು

ಗುಳ್ಳವ್ವ ಅಂದವಾಗಿ ಕಾಣಲು ಅದಕ್ಕೆ ಬಣ್ಣದಲ್ಲಿ ಅದ್ದಿದ ಜವೆ ಕಾಳು, ಕುಸುಬೆ ಹಾಗೂ ಗುಲಗಂಜಿಗಳನ್ನು ಚುಚ್ಚಿ ಅಲಂಕಾರ ಮಾಡುವರು. ನಂತರ ಗುಳ್ಳವ್ವನ ಮುಂದೆ, ಹಣ್ಣುಗಳನ್ನು ಮತ್ತು ಖಣ ಇಡುತ್ತಾರೆ. ಹೂವುಗಳನ್ನು ಏರಿಸುತ್ತಾರೆ. ದೀಪ ಹಚ್ಚಿ ಪೂಜಿಸುತ್ತಾರೆ. ನಂತರ ನೈವೇದ್ಯ ಹಿಡಿಯಲಾಗುತ್ತದೆ. ರಾತ್ರಿ ಹೊತ್ತಿನಲ್ಲಿ ಎಲ್ಲಾ ಹೆಣ್ಣು ಮಕ್ಕಳು ಗುಂಪು ಗುಂಪಾಗಿ ಎಲ್ಲರ ಮನೆ ಮನೆಗೆ ಹೋಗಿ ಗುಳ್ಳವ್ವನಿಗೆ ಆರತಿ ಮಾಡಿ ಹಾಡುತ್ತಾರೆ. ಆಗ ಸಾಮಾನ್ಯವಾಗಿ ಹಾಡುವ ಹಾಡು ಇಂತಿವೆ.

ಒಂದ ಮೂಲ್ಯಾಗ ಒಂದು ಪತ್ತರಿ
ಸಾಲ ಮೂಲ್ಯಾಗ ಬೆಲ್ಲ ಪತ್ತರಿ
ಪತ್ತರ್ಯಾಗ ಪನಿವಾರ
ಗುಳ್ಳವ್ವ ನಿನಗೆ ಮುತ್ತಿನ ಜನಿವಾರ

ಕಡ್ಲಿ ಹೊಲಕ್ಕೆ ಹೋಗಿದ್ದೆನಾ
ಕಡ್ಲಿ ಸರಾ ಹರದೋತ
ಹ್ಯಾಂಗ ಹೋಗಲಿ ಮನ್ಯಾಗ
ಹ್ಯಾಂಗ ಹೋಗಲಿ ಮನ್ಯಾಗ

ನಮ್ಮತ್ತಿ ಬೈತಾಳ ನನಗೆ ಕೇಳ ಗೆಳತಿ ಕೇಳ ಹೇಳ ಗೆಳತಿ ಹೇಳ
ಗುಳ್ಳವ್ವ ನಿನ್ನ ಮಾಯಾಮಾಡಿ ಕರದ ತಂದೀನ
ನೀ ಬಂದೀದೆಂತ ನಾ ಬಂಧೀನ
ಜಾಲಿ ಹೂ ಕೊಯ್ದು ತಂದೀನ
ಗುಳ್ಳವ್ವ ನಿನ್ನ ಮಾಯಾ ಮಾಡಿ ಕರ ತಂದೀನ
ನೀ ಬಂದಿಯಂತನಾ ಬಂದೀನ.

ಮುತ್ತಿನಂಥ ಗುಳ್ಳವ್ವಗ ಮುತ್ತೈದರಲ್ಲಾ ಕೂಡಿ
ಮುತ್ತಿನ ಆರತಿ ಎತ್ತಿರೆ

ಮರುದಿನ ಅಂದರೆ ಬುಧವಾರ ಗುಳ್ಳವ್ವನ ವಿಸರ್ಜನೆ ಮಾಡಲಾಗುತ್ತದೆ. ಈ ಸಂದರ್ಭದಲ್ಲಿ ಹೆಣ್ಣು ಮಕ್ಕಳೂ ಅಂದು ಮಧ್ಯಾಹ್ನದ ವೇಳೆಗೆ ವಿವಿಧ ರೀತಿಯ ಅಡುಗೆ ಮಾಡಿ ಅದನ್ನೆಲ್ಲ ಕಟ್ಟಿಕೊಂಡು ಗುಳ್ಳವ್ವನನ್ನು ತೆಗೆದುಕೊಂಡು, ಉದ್ಯಾನವನ , ನದಿ ದಂಡೆ , ಕೆರೆ ಕಡೆ, ಹೋಗುತ್ತಾರೆ. ಅಲ್ಲಿ ಎಲ್ಲರೂ ಸೇರಿ ನಕ್ಕು ನಲಿಯುತ್ತಾ ತಾವು ತಂದ ಊಟವನ್ನು ಎಲ್ಲರೂ ಹಂಚಿಕೊಂಡು ಊಟ ಮಾಡುತ್ತಾರೆ.ಹೂದೋಟದಲ್ಲಿ ಊಟ ಮಾಡುವುದರಿಂದ ಇದಕ್ಕೆ "ಬನದೂಟ" ಎನ್ನುವರು.

ಊಟವಾದ ನಂತರ ಹೆಣ್ಣು ಮಕ್ಕಳೆಲ್ಲಾ ಸೇರಿ ಎರಡು ಗುಂಪುಗಳನ್ನಾಗಿ ಮಾಡಿಕೊಳ್ಳುತ್ತಾರೆ. ಮದುವೆ ಆಟವನ್ನು ಆಡುತ್ತಾರೆ. ಒಂದು ಗುಂಪು ಗಂಡಿನವರದು ಇನ್ನೊಂದು ಗುಂಪು ಹೆಣ್ಣಿನವರದು. ಅಲ್ಲಿಯೇ ಒಂದೊಂದು ಗುಂಪು ಪ್ರತ್ಯೇಕವಾಗಿ ಕುಳಿತುಕೊಳ್ಳುತ್ತಾರೆ. ಆಮೇಲೆ ಗಂಡಿನ ಗುಂಪಿನವರು ಹೆಣ್ಣಿನ ಮನೆಗೆ ಹೋಗಿ ಹೆಣ್ಣು ಕೇಳುತ್ತಾರೆ. ಮೊದಲು ಕೊಡಲು ಒಪ್ಪದವರು ನಂತರ ಒಪ್ಪಿ ಹೆಣ್ಣಿಗೆ ಯಾವ ಆಭರಣ ಹಾಕುತ್ತೀರಿ ಎಂದು ಕೇಳುವರು . ಈ ಸಂದರ್ಭದಲ್ಲಿ ವಿವಿಧ ಹಾಡುಗಳನ್ನು ಹಾಡುವುದುಂಟು. ಪರಸ್ಪರ ಗಂಡಿನ ಮಧ್ಯೆ ಬೀಗತನ ನಡೆದು ಮದುವೆ ಆಗುತ್ತದೆ. ನಂತರದಲ್ಲಿ ಗಂಡಿನ ಕಡೆಯವರು ಹೆಣ್ಣನ್ನು ಕರೆಯಲು ಮನೆಗೆ ಬರುತ್ತಾರೆ. ಹೆಣ್ಣಿಗೆ ಆರಾಮವಿಲ್ಲವೆಂದು ಕಳುಹಿಸುವುದಿಲ್ಲ. ನತಂರ ಎರಡನೇ ಸಲ ಕರಿಯಕ್ಕೆ ಬರುತ್ತಾರೆ. ಮತ್ತೆ ಅದೇ ರೀತಿ ಉತ್ತರ ಕೊಟ್ಟು ಕಳುಹಿಸುತ್ತಾರೆ. ಮತ್ತೆ ಕರೆಯಲು ಹೋದಾಗ ಅವಳು ಸತ್ತು ಹೋಗಿರುವ ಸುದ್ದಿ ಗೊತ್ತಾಗುತ್ತದೆ. ಆಗ ಹಾದ್ಯಾಡಿಕೊಂಡು ಅಳುತ್ತಾರೆ. ಈ ಸುದ್ದಿ ತಿಳಿದು ಗಂಡನು ಸತ್ತು ಇಬ್ಬರ ಅಂತಿಮ ಕ್ರಿಯೆ ಮಾಡುವರು. ಇಲ್ಲಿಗೆ ಆಟ ಮುಗಿಯುತ್ತದೆ ಆನಂತರ ಗುಳ್ಳವ್ವನ ವಿಸರ್ಜನೆ ಮಾಡಿ ಬರುವಾಗ ಸಾಮಾನ್ಯವಾಗಿ ಈ ಹಾಡನ್ನು ಹಾಡುವುದುಂಟು. (ಮಳೆ ಬಾರದೆ ಇದ್ದಾಗ ಗುಳ್ಳವ್ವನ ಪೂಜೆ ಮಾಡುವರು. ಗುಳ್ಳವ್ವನನ್ನು ವಿಸರ್ಜನೆ ಮಾಡದೆ ಒಂದೆಡೆ ಇಟ್ಟು ಮನೆಗೆ ಬರುವರು.)

"ಗುಡ್ಡಕ್ಕೆ ಹೋಗಲೇನಿ, ಗುಲಗಂಜಿ ತರಲೇನಿ ಎಂದು ಬರಲೆ ಗುಳ್ಳವ್ವ ಗುಳ್ಳವ್ವಾ " ಇಲ್ಲಿ ವಿವಿಧ ಊರುಗಳ ಹೆಸರುಗಳನ್ನು ಹೇಳಿ ಒಂದೊಂದು ಊರಿನಿಂದ ತಿನಿಸು ಆಭರಣ ತರುತ್ತೇನೆ ಮತ್ತೆ "ಬರತ್ತಿ ಗುಳ್ಳವ್ವಾ" ಎಂದು ಹೇಳಲಾಗುತ್ತದೆ.

**ರತ್ತೊ ರತ್ತೊ ರಾಯನ ಮಗಳೇ**

ಈ ಆಟದಲ್ಲಿ 5ಕ್ಕಿಂತ ಹೆಚ್ಚು ಜನರು ಇರಬೇಕು . ಇದರಲ್ಲಿ ಇಬ್ಬರು ಕೈ ಜೋಡಿಸಿ ಮೇಲೆ ಎತ್ತಿ ನಿಂತಿರುತ್ತಾರೆ. ಅದರಲ್ಲಿ ಇಬ್ಬರು ಒಂದು ಹಣ್ಣಿನ , ಪ್ರಾಣಿಯ , ಹೂವಿನ , ಪಕ್ಷಿಯ ಅಥವಾ ಮರದ ಹೆಸರನ್ನು ಇಟ್ಟುಕೊಂಡು ಬರುತ್ತಾರೆ. ಉದಾಹರಣೆಗೆ ಒಬ್ಬರು ಮಾವಿನ ಹಣ್ಣು, ಇನ್ನೊಬ್ಬರು ಸೇಬು ಇಟ್ಟುಕೊಂಡಿರುತ್ತಾರೆ. ಅನಂತರ ಪ್ರಾಸಬದ್ಧವಾಗಿ ಹಾಡುತ್ತಾರೆ.

ರತ್ತೋ ರತ್ತೋ ರಾಯನ ಮಗಳೇ
ಬಿತ್ತೊ ಬಿತ್ತೊ ಭೀಮನ ಮಗಳೇ
ಹದಿನಾರಂಭೆ ಕಾಯಿಸಲಾರೆ
ಬೈಟು ಕಂಬ ಬಾಳೆ ಕಂಬ
ಕುಕ್ಕರ ಬಸವಿ ಕೂರೆ ಬಸವಿ

ಎಂದು ಹಾಡು ಹೇಳುತ್ತಿರುತ್ತಾರೆ. ಉಳಿದ ಆಟಗಾರರು ಇಬ್ಬರು ನಾಯಕರ ಕೈಗಳ ಮಧ್ಯ ಓಡುತ್ತಿರುತ್ತಾರೆ. ಕೂರೆ ಬಸವಿ ಎಂದು ಬಂದಾಗ ಇಬ್ಬರು ತಮ್ಮ ಕೈಗಳನ್ನು ಕೆಳಗೆ ಇಳಿಸುತ್ತಾರೆ. ಕೆಳಗೆ ಇಳಿಸುವ ಸಂದರ್ಭದಲ್ಲಿ ಯಾರು ಕೈಗಳ ಮಧ್ಯ ಸಿಕ್ಕಿಕೊಳ್ಳುತ್ತಾರೊ ಅವರನ್ನು ಪಕ್ಕಕ್ಕೆ ಕರೆದುಕೊಂಡು ಹೋಗಿ ಯಾರಿಗೂ ಗೊತ್ತಾಗದಂತೆ ಕೇಳುತ್ತಾರೆ. ಅವರಿಗೆ ಮಾವಿನ ಹಣ್ಣು ಬೇಕೆ ಅಥವಾ ಸೇಬು ಬೇಕೆ ಎಂದು ಕೇಳುತ್ತಾರೆ. ಅವರು ಮಾವಿನ ಹಣ್ಣು ಬೇಕು ಎಂದರೆ ಮಾವಿನಹಣ್ಣು ಇಟ್ಟುಕೊಂಡವರ ಸೇನೆಗೆ ಸೇರುತ್ತಾರೆ. ಅವರು ಸೇಬು ಬೇಕು ಎಂದರೆ ಸೇಬು ಇಟ್ಟುಕೊಂಡವರ ಸೇನೆಗೆ ಸೇರುತ್ತಾರೆ. ಇದೇ ರೀತಿ ಪ್ರಾಸ ಪದ್ಯ ಹಾಡು ಮುಂದುವರೆಯುತ್ತದೆ. ಹಾಗೆ ಮತ್ತೆ ಮತ್ತೆ ಕೇಳುತ್ತಾರೆ. ಹಾಗೆ ಮತ್ತೆ ಸೇನೆ ಬೆಳೆಯುತ್ತದೆ. ಹಾಗೆ ಎಲ್ಲಾ ಆಟಗಾರರು ಮುಗಿಯುವವರೆಗೂ ಮತ್ತೆ ಮತ್ತೆ ಹಾಡುತ್ತಾರೆ, ಕೇಳುತ್ತಾರೆ. ಸೇನೆ ಬೆಳೆಸುತ್ತಾರೆ. ಕೊನೆಗೆ ಎರಡು ಸೇನೆ ಆಗುತ್ತದೆ ಒಂದು ಮಾವಿನ ಹಣ್ಣಿನ ಸೇನೆ ಇನ್ನೊಂದು ಸೇಬು ಹಣ್ಣಿನ ಸೇನೆ . ಈ ಎರಡು ಸೇನೆ ಸೇರಿಕೊಂಡು ಕೈ ಹಿಡಿದು ಹಗ್ಗ ಜಗ್ಗಾಟ ಆಡುತ್ತಾರೆ. ಕೊನೆಗೆ ಒಬ್ಬರ ಸೇನೆಯಿಂದ ಸೇನೆಗೆ ಕೈಯನ್ನು ಗಟ್ಟಿಯಾಗಿ ಹಿಡಿದು ಎಳೆಯುತ್ತಾರೆ. ಒಂದು ಸೇನೆಯ ಜನರು ಕಡಿಮೆಯಾಗುತ್ತಾ ಬರುತ್ತಾರೆ. ಕೊನೆಗೆ ಎರಡು ಸೇನೆ ಹೋಗಿ ಒಂದು ಸೇನೆ ಆಗುತ್ತದೆ. ಯಾವ ಸೇನೆ ಅವರ ವಿರುದ್ದ ಇದ್ದ ಸೇನೆಯನ್ನು ತಮ್ಮದಾಗಿ ಮಾಡಿಕೊಳ್ಳು ತ್ತಾರೋ ಆಸೇನೆ ಗೆಲ್ಲುತ್ತದೆ.

**ಕಳ್ಳೆ ಮುಳ್ಳೆ**

ಬಾರದ ಮಳೆ ಬರುವಾಗ ಮಕ್ಕಳೆಲ್ಲಾ ಸೇರಿ ಆಡುವ ಆಟವಾಗಿದೆ. ನಾಲ್ಕಾರು ಜನ ಆಟಗಾರರು ಸೇರಿ ತಮ್ಮ ತಮ್ಮ ಕೈಯನ್ನು ಬುಜಕ್ಕೆ ಸಮಾಂತರವಾಗಿ ಮುಂದಕ್ಕೆ ಅಥವಾ ಪಕ್ಕಕ್ಕೆ ಚಾಚಬೇಕು .ನಂತರ ಎಲ್ಲರು ಚಕ್ರ ತಿರುಗಿದ ಹಾಗೆ ಹಾಡುತ್ತಾ ತಿರುಗುವರು. ಯಾರು ಬಹಳ ಹೊತ್ತಿನವರೆಗೆ ತಿರುಗುತ್ತಾರೊ ಅವರು ಗೆದ್ದಂತೆ. ತಿರುಗುವಾಗ ಹೇಳುವ ಹಾಡು:

ಕಳ್ಳೆ ಮಳ್ಳೆ ಕಪ್ಪಾಟ ಮುಳ್ಳೆ
ಹೂಯ್ಯೊ ಮಳೆರಾಯ
ಮಳೆ ಬಂತೋ ಮಾರಾಯ
ಕೆರೆ ತುಂಬಲೋ ಸೂರಾಯ
ಮಳೆ ಬಂತೊ ಹುಡುಗರ‍್ಯಾಹೂಯ್ಯೊ
ಅಥವಾ ನಿಮ್ಮಪ್ಪನ ದುಪಟ್ಯಾ ಹೊಕ್ಕಾರ‍್ಯಾ7
ಮಳೆ ಬಂತೊ ಮಳೆ ಬಂತೊ ಮಕ್ಕಳಿರಾ
ಅಪ್ಪನ ಪಂಚೆಗೆ ಹೋಕ್ಕಳಿರೊ

ಎಂದು ಹಾಡುತ್ತಾ ತಿರುಗುತ್ತಾರೆ. ಈ ಆಟಕ್ಕೆ 'ಅಪ್ಪಾಲೆ ತಿಪ್ಪಾಲೆ', 'ಚಿಟ್ಟೆ ಮಳೆರಾಯ' ಎಂತಲೂ ಕರೆಯುತ್ತಾರೆ.

**ಗೂರಚಿ ಹಾಡು:**

ಮಳೆಗಾಗಿ ಪ್ರಾರ್ಥನೆ ಮಾಡುವ ಆಟವಾಗಿದೆ. ಇಲ್ಲಿ ಗೂರಚಿ ಆಗುವವರು ತಲೆಯ ಮೇಲೆ ಒಂದೊಂದು ಹಂಚು (ರೊಟ್ಟಿ ಬೆಯಿಸುವ) ಇಟ್ಟುಕೊಂಡು ಅದರ ಮೇಲೆ ಒದ್ದೆ ಮಾಡಿದ ಮಣ್ಣನ್ನು ಗುಪ್ಪೆ ಮಾಡಿ ಮಧ್ಯದಲ್ಲಿ ಇಟ್ಟು, ಆ ಮಣ್ಣಿನಲ್ಲಿ ಗರಿಕೆ ಹುಲ್ಲನ್ನು ಚುಚ್ಚಿರುತ್ತಾರೆ. ಚಡ್ಡಿಯನ್ನು ಧರಿಸಿ ಬರಿ ಮೈಯಲ್ಲಿ ಮನೆ ಮನೆಗೆ ಹೋಗಿ ಹಾಡು ಹೇಳುತ್ತಾ ತಿರುಗುತ್ತಾರೆ. ಮನೆಯವರು ಒಂದು ಬಿಂದಿಗೆ ಅಥವಾ ಒಂದು ಚೆಂಬು ನೀರನ್ನು ತಂದು ಗೂರಚಿಯ ತಲೆಯ ಮೇಲೆ ಹಾಕುತ್ತಾರೆ. ಆಗ ಸುತ್ತಲು ಇರುವ ಹುಡುಗರು ಹಾಡು ಹೇಳುವರು.

ಗೂರಚಿ ಗೂರಚಿ ಎಲ್ಲಾಡಿ ಬಂದಿ
ಹಳ್ಳ ಕೊಳ್ಳ ಸುತ್ತಾಡಿ ಬಂದೆ
ಕಾರ ಮಳೆಯೋ ಕಪಾಟ ಮಳೆಯೋ
ಸೂರ ಮಳೆಯೋ
ಸೂರಿಯೋ ಮಳೆಯೋ
ಸುರಿಯೋ ಸುರಿಯೋ ಮಳೆರಾಯ

ಒಬ್ಬ ಗೂರಚಿಗೆ ಸೂಸ್ತಾಗಿ ಗೂರಚಿ ಆಗಲು ಕಷ್ಟ ವಾಗುತ್ತಿದ್ದರೆ. ಗುಂಪಿನಲ್ಲಿ ಹುಡುಗರರಲ್ಲಿ ಇನ್ನೊಬ್ಬರು ಗೂರಚಿ ಆಗುವರು.

**ಕಲ್ಲ ಬೇಕೊ? ನೆಲ ಬೇಕೊ? (ಕಲ್ಲೊ – ಮಣ್ಣೊ)**

ಆಟದಲ್ಲಿ ಮೊದಲು ನಾಯಕನನ್ನು ನಿರ್ಧರಿಸುತ್ತಾರೆ. ನಂತರ ಎಲ್ಲಾ ಆಟಗಾರರು ಸೇರಿ ಕಳ್ಳನ್ನು ಆಯ್ಕೆಮಾಡುವರು. ನಾಯಕನು ಕಳ್ಳನಾದವನ ಕೈ ಹಿಡಿದು ತಿರುಗಿಸುತ್ತಾ "ಕಲ್ಲ ಬೇಕೊ – ನೆಲ ಬೇಕೊ" ಎಂದು ಕೇಳುವರು. ಕಳ್ಳ ಕಲ್ಲು ಕೇಳಿದರೆ ಆಟಗಾರರು ನೆಲದ ಮೇಲೆ, ನೆಲ ಕೇಳಿದರೆ ಕಲ್ಲ ಮೇಲೆ ನಿಲ್ಲ ಬೇಕು. ಆಟಗಾರರು ಕಲ್ಲು ಬಿಟ್ಟು ಕೆಳಗಿಳಿದು ಬಂದಾಗ ಅಥವಾ ನೆಲದ ಮೇಲೆ ಇರುವಾಗ ನೆಲ ಬಿಟ್ಟು ಕಲ್ಲಿನ ಮೇಲೆ ಬರುವಾಗ ಕಳ್ಳ ಆ ಆಟಗಾರರನ್ನು ಮುಟ್ಟುವ ಪ್ರಯತ್ನ ನಡೆಯುತ್ತದೆ. ಆಗ ಆಟಗಾರರು ಈ ಪ್ರಾಸವನ್ನು ಹೇಳುತ್ತಾ ಕಳ್ಳನನ್ನು ಪೀಡಿಸುತ್ತಾರೆ.

ನಿನ್ನ ಕಲ್ಲಾಗ ಬಂದೀವಿ ನೋಡು ಅಥವಾ ನಿಮ್ಮ ಮಣ್ಣಿಗಿ ಬಂದೊ
ನಿಮ್ಮ ಕಲ್ಲಿಗಿ ಬಂದೋ
ನಿಮ್ಮ ಕಲ್ಲೆಲ್ಲ ಸವಿತೊ9
ನಿನ್ನ ಗಂಡಗ ರೊಟ್ಟಿ ಮಾಡ

ಹೀಗೆ ಪ್ರಾಸ ಹೇಳುತ್ತಾರೆ. ಕಳ್ಳನಾದವನು ಅವರನ್ನು ಮುಟ್ಟಿದರೆ ಅವರೇ ಔಟ್ ಆಗುತ್ತಾರೆ. ಆಗ ಮುಟ್ಟಸಿಕೊಂಡವರು ಮುಂದಿನ ಆಟಕ್ಕೆ ಕಳ್ಳನಾಗುತ್ತಾರೆ.

ಹೀಗೆ ಜಾನಪದ ಪ್ರಾಸ ಪದ್ಯ ಆಟಗಳನ್ನು ಅಗೆದಷ್ಟು ಮುಗಿಯುವುದಿಲ್ಲ . 'ಆಟಗಳಿಲ್ಲದೆ ಪ್ರಾಸಗಳಿಲ್ಲ . ಪ್ರಾಸಗಳಿಲ್ಲದೆ ಆಟಗಳಿಲ್ಲ' ಎನ್ನುವಷ್ಟು ಆಟಗಳಲ್ಲಿ ಪದ್ಯಗಳು ಹಾಸುಹೋಕ್ಕಾಗಿವೆ.

ಮಕ್ಕಳೂ ತಮ್ಮ ಸೃಜನಶೀಲತೆಯನ್ನು ತೋರಿಸುವುದು ಇಲ್ಲಿ ಕಂಡು ಬರುತ್ತದೆ. ಇನ್ನೂ ಅನೇಕ ಬಗೆ ಬಗೆ ಪ್ರಾಸ ಆಟಗಳು ಇಂದಿನ ವ್ಯವಸ್ಥೆಗೆ ಹೊಂದಿಕೊಳ್ಳುವಂತೆ ಹುಟ್ಟಿಕೊಂಡಿರಹಬಹುದು. ಮಕ್ಕಳ ಪ್ರಪಂಚ ತುಂಬಾ ವಿಶಾಲವಾದದ್ದು ಮತ್ತು ಅಷ್ಟೇ ವೈವಿಧ್ಯತೆಯಿಂದ ಕೂಡಿ ವರ್ಣರಂಜಿತವಾಗಿರುತ್ತದೆ. ಇಂತಹದೆಲ್ಲದರ ವಿವಿಧ ಮುಖಗಳನ್ನು ಜನಪದ ಆಟಗಳು ಪರಿಚಯಿಸಿ ಕೊಡುವುತ್ತವೆ.

## ಆಕರ ಗ್ರಂಥಗಳು


1. ತ. ಮಂಪ ಮೂರ್ತಿ : ಜಾನಪದ ಸಮೀಕ್ಷೆ : ಪುಟ –129
2. ಡಾ : ಬಿ.ಎಸ್. ಗದ್ದಗಿಮಠ : ಕನ್ನಡ ಜಾನಪದ ಗೀತೆಗಳು : ಪುಟ– 51
3. ಡಾ :: ಎಂ.ಎಂ.ಕಲಬುರ್ಗಿ: ಉ.ಕ.ಜ.ಪದ್ಯ ಪ್ರಕಾರಗಳು
4. ಓ.ಖ. ನಾಯಕ & ಶಾಂತಿನಾಯಕ: ಉ.ಕ.ಜಿ. ಜನಪದ ಆಟಗಳು. ಪುಟ:114
5. ಡಾ :: ಎಂ.ಎಂ.ಕಲಬುರ್ಗಿ : ಉ.ಕ.ಜನಪದ ಪದ್ಯ ಪ್ರಕಾರಗಳು ಪುಟ 142
6. ಡಾ:: ಎಂ.ಎಂ.ಕಲಬುರ್ಗಿ : ಉ.ಕ ಜನಪದ ಪದ್ಯ ಪ್ರಕಾರಗಳು ಪುಟ –142
7. ಚಂದ್ರಶೇಖರ ಕಂಬಾರ : ಜನಪದ ಸಾಹಿತ್ಯ –ಪುಟ–19
8. ಸುಶೀಲ ಹೊನ್ನೇಗೌಡ : ಜನಪದ ಆಟಗಳು ಪುಟ– 19
9. ಸುಶೀಲ ಹೊನ್ನೆಗೌಡ –ಜನಪದ ಆಟಗಳು –ಪುಟ– 23